ಶ್ರೀ ಹೆಚ್. ಏಕಾಂತಯ್ಯ : – ಎಕ್ಸೈಸ್ ಲ್ಯಾಂಡನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಅಲ್ಲಿ ಎಕ್ಸೈಸೂ ಇಲ್ಲ, ಫಾರೆಸ್ಟೂ ಇಲ್ಲ. ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಇದನ್ನು ಬಡವರಿಗೆ ಕೊಡುವುದಕ್ಕೆ ಏನು ತೊಂದರೆ ಇದೆ?

ಶ್ರೀ ಎಂ. ರಾಜಶೇಖರಮೂರ್ತಿ : – ಈ ವರ್ಗದ ಲ್ಯಾಂಡ್ ಏನಿದೆ, ಇದನ್ನು ನಿಷೇಧ ಮಾಡಿ ಇದನ್ನು ಕಾನೂನು ಪ್ರಕಾರ ಕೊಡಬಾರದು ಎಂದು ನೀವು ಸಲಹೆ ಕೊಟ್ಟಿದ್ದೀರಿ. ಆದರೆ ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಹೋದಾಗ, ರೂಲ್ ಮತ್ತು ಆಕ್ಟ್ ಎರಡೂ ಅಡ್ಡ ಬರುತ್ತವೆ. ಆದ್ದರಿಂದ ಈ ರೂಲ್ ಮತ್ತು ಆಕ್ಟ್ ಎರಡನ್ನೂ ತಿದ್ದುಪಡಿ ಮಾಡಿ, ತಮ್ಮ ಮುಂದೆ ಬರಬೇಕಾಗುತ್ತದೆ, ನೀವು ಸಲಹೆ ಕೊಟ್ಟಿದ್ದೀರಿ. I will get that matter examined.

ಶ್ರೀ ಎಂ. ನಾರಾಯಣಸ್ವಾಮಿ : – ಮಾನ್ಯ ಅಧ್ಯಕ್ಷರೇ, ನಮಗೂ ಒಂದು ಅವಕಾಶ ಕೊಡಬೇಕು. ತಾವು ಅನೇಕ ಜನರಿಗೆ ಅವಕಾಶ ಕೊಡುತ್ತೀರಿ. ನಮಗೆ ಕೊಡುವುದಿಲ್ಲ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ, ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಈ ದ್ವಂದ್ವ ನೀತಿ ಬೇಡ.

ಅಧ್ಯಕ್ಷರು : – ನಾನು ಹೇಳುತ್ತೇನೆ, ಮೂಲ ಪ್ರಶ್ನೆ ಕೇಳಿದವರು ರಾಮಸ್ವಾಮಿಯವರು. ಈ ಪ್ರಶ್ನೆಯ ಗಂಭೀರತೆಯನ್ನು ನಾನು ತಿಳಿದುಕೊಂಡು, ಹೆಚ್ಚಿನ ಜನರಿಗೆ ಅವಕಾಶ ಕೊಟ್ಟಿದ್ದೇನೆ. ನನ್ನ ಮೇಲೆ, ಆರೋಪ ಮಾಡತಕ್ಕಂಥಾದ್ದು ಸರಿಯಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : – ಇದು ಗಹನವಾದ ವಿಚಾರ.

ಅಧ್ಯಕ್ಷರು : – ತಾವು ಬೇರೆ ರೂಪದಲ್ಲಿ ಇದೇ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಅದನ್ನು ಬಿಟ್ಟು, ನನಗೆ ಅವಕಾಶ ಕೊಡುತ್ತಾ ಇಲ್ಲವೆಂದು ಹೇಳಬಾರದು. ಮೂಲ ಪ್ರಶ್ನೆಯ ಮೇಲೆ 2-3 ಉಪಪ್ರಶ್ನೆಗಳನ್ನು ಕೇಳುವ ಪದ್ಧತಿ ಇದೆ. ಆದರೆ, ವಿಷಯದ ಗಂಭೀರತೆಯನ್ನು ಅನುಸರಿಸಿ ನೋಡಿ, ಹೆಚ್ಚು ಅವಕಾಶ ಕೊಟ್ಟಿದ್ದೇನೆ. ಆದರೂ ಅವಕಾಶ ಕೊಡಲಿಲ್ಲವೆಂದು ಹೇಳುವುದು ಸರಿಯಲ್ಲ. ಮೂಲ ಪ್ರಶ್ನೆ ಕೇಳಿದವರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ತಾವು ಬೇರೆ ರೂಪದಲ್ಲಿ ಪ್ರಶ್ನೆ ಕೇಳಿ; ಗಮನ ಸೆಳೆಯುವ ಸೂಚನೆ ಮೂಲಕ ಇಲ್ಲವೇ ನಿಯಮ 334ರ ಅಡಿಯಲ್ಲಿ ಕೇಳಿ, ತಮಗೆ ಆ ಅಧಿಕಾರ ಇದೆ.

ಶ್ರೀ ಎಂ. ನಾರಾಯಣಸ್ವಾಮಿ : – ನಾನು ಕೇಳುವ ಪ್ರಶ್ನೆಗಳು ಯಾವುವೂ ಬರುತ್ತಲೇ ಇಲ್ಲ.

ವಿಷಯ : – ಧಾರವಾಡದ ಕೆ.ಸಿ.ಸಿ. ಬ್ಯಾಂಕಿನ ಚುನಾವಣೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 123(402)

ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : –

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ)ಧಾರವಾಡ ಕೆ.ಸಿ.ಸಿ. ಬ್ಯಾಂಕನ್ನು ಯಾವ ದಿನಾಂಕದಂದು ಸೂಪರ್‌ಸೀಡ್ ಮಾಡಲಾಯಿತು?

ಆ) ಸೂಪರ್‌ಸೀಡ್ ಆದ ನಂತರ ಎಷ್ಟು ಅವಧಿಯ ಮೇಲೆ ಚುನಾವಣೆ ನಡೆಸಲು ಕಾನೂನಿನಲ್ಲಿ ಅವಕಾಶವಿದೆ?

ಇ)ಸದರಿ ಬ್ಯಾಂಕ್ ಸೂಪರ್-ಸೀಡ್ ಆಗಿ ಎರಡು ವರ್ಷಗಳಿಗೂ ಹೆಚ್ಚು ಅವಧಿಯಾಗಿದ್ದಾಗ್ಯೂ ಇದುವರೆವಿಗೂ ಆಡಳಿತ ಮಂಡಳಿಗೆ ಚುನಾವಣೆ ನಡೆಸದಿರಲು ಕಾರಣಗಳೇನು?

ಈ) ಸದರಿ ವಿಷಯದ ಬಗ್ಗೆ ಈಗಾಗಲೇ ಬಹಳ ತಡವಾಗಿರುವುದರಿಂದ ಕೂಡಲೆ ಕೆ.ಸಿ.ಸಿ ಬ್ಯಾಂಕಿನ ಚುನಾವಣೆಗಳನ್ನು ನಡೆಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) : -

ಕೆ.ಸಿ.ಸಿ. ಬ್ಯಾಂಕ್ ಧಾರವಾಡ ಇದರ ವ್ಯವಸ್ಥಾಪಕ ಮಂಡಳಿಯನ್ನು ದಿನಾಂಕ 23-8-90 ರಂದು ರದ್ದುಗೊಳಿಸಲಾಯಿತು.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 30 ಎ ಪ್ರಕಾರ ಪ್ರಾರಂಭದಲ್ಲಿ 2 ವರ್ಷದ ಅವಧಿಗೆ ತದನಂತರ ಸರ್ಕಾರ ಅವಶ್ಯವಿದೆ ಎಂದು ಕಂಡುಬಂದಲ್ಲಿ ಇನ್ನೊಂದು ವರ್ಷ ವಿಶೇಷಾಧಿಕಾರಿಯವರ ಅವಧಿಯನ್ನು ಮುಂದುವರಿಸಬಹುದು.

ಬ್ಯಾಂಕಿನ ವ್ಯವಸ್ಥಾಪಕ ಮಂಡಳಿಯನ್ನು ರದ್ದುಗೊಳಿಸುವಾಗ ಮಾಡಲಾದ ಆರೋಪಗಳ ಪೈಕಿ ಕೆಲವು ಆರೋಪಗಳ ಮೇಲೆ ಕೈಗೊಳ್ಳಬೇಕಾದ ಕ್ರಮ ಪೂರ್ಣಗೊಂಡಿರುವುದಿಲ್ಲ. ಮತ್ತು ಒಟ್ಟುಗೂಡಿಸಿದ ಪ್ರಾಥಮಿಕ ಪತ್ತಿನ ಸೇವಾ ಸಹಕಾರ ಸಂಘಗಳಲ್ಲಿ ಕೆಲವು ಸಂಘಗಳು ಪ್ರಭಾರವನ್ನು ವಹಿಸಿಕೊಟ್ಟ ನಂತರವೂ ರಾಜ್ಯದ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದರಿಂದ ಚುನಾವಣೆಯನ್ನು ಮಾಡುವಲ್ಲಿ ಕಾನೂನಿನ ತೊಡಕು ಇರುವುದರಿಂದ ಚುನಾವಣೆ ನಡೆಸಲು ಆಗಿರುವುದಿಲ್ಲ.

ಈಗ ಇರುವ ಕಾನೂನು ತೊಡಕುಗಳನ್ನು ನಿವಾರಿಸಿದ ತಕ್ಷಣ ಚುನಾವಣೆಗಳನ್ನು ನಡೆಸಲಾಗುವುದು.

ಶ್ರೀ ಪಿ.ಸಿ. ಸಿದ್ದನಗೌಡರ್ : - ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಈ ಧಾರವಾಡ ಜಿಲ್ಲಾ ಡಿ.ಸಿ.ಸಿ ಬ್ಯಾಂಕ್ ಸೂಪರ್ ಸೀಡ್ ಆದ 2 ವರ್ಷಕ್ಕೆ ಚುನಾವಣೆ ಆಗಬೇಕೆಂದು ಕಾನೂನಿನಲ್ಲಿದೆ ಎಂದು ಸರ್ಕಾರದವರು ಉತ್ತರ ಹೇಳುತ್ತಿದ್ದಾರೆ. ಇದರಲ್ಲಿ ಮತ್ತೊಂದು ಉತ್ತರ ಏನು ಹೇಳುತ್ತಾರೆ ಎಂದರೆ ಸರ್ಕಾರ ಅವಶ್ಯವಿದೆ ಎಂದು ಕಂಡುಬಂದರೆ ಆಡಳಿತಗಾರರನ್ನು ಮೂರುವರ್ಷದವರೆಗೆ ಹಾಕಬಹುದು ಎಂದು ಹೇಳುತ್ತಿದ್ದಾರೆ. ಮೂರು ವರ್ಷ 6 ತಿಂಗಳಾದರೂ ಚುನಾವಣೆಯನ್ನು ಸರ್ಕಾರದವರು ಮಾಡುತ್ತಿಲ್ಲ. ಇದರಿಂದಾಗಿ ರೈತರಿಗೆ ಈ ಸಾಲ ಮತ್ತೊಂದು ದೊರೆಯುವುದರಲ್ಲಿ ಬಹಳ ತೊಂದರೆ ಆಗಿದೆ. ಚುನಾವಣೆಯನ್ನು ಬೇಗ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ ಸರ್ಕಾರದ ಉತ್ತರದಲ್ಲಿ ಈ ಮ್ಯಾನೇಜ್‌ಮೆಂಟ್‌ನವರ ಮೇಲೆ ಆಪಾದನೆಗಳಿವೆಯೆಂದು ಹೇಳಿದ್ದಾರೆ. ಆ ಆಪಾದನೆಗಳು ಯಾವುವು ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : - ಮಾನ್ಯ ಅಧ್ಯಕ್ಷರೇ, ಈ ಬ್ಯಾಂಕನ್ನು ಸುಮಾರು 23-8-90ರಲ್ಲಿ ಸೂಪರ್‌ಸೀಡ್ ಮಾಡಲಾಗಿದೆ. ಮತ್ತು ನಿಯಮ 30 ಎ ಪ್ರಕಾರ ಈಗಾಗಲೇ ಎರಡು ವರ್ಷ ಮುಗಿದು ಪುನಃ ಇನ್ನು ಒಂದು ವರ್ಷ ಎಕ್ಸ್‌ಟೆಂಡ್ ಕೂಡ ಮಾಡಿದ್ದೇವೆ. ತದನಂತರ ಅಡ್ಮಿನಿಸ್ಟ್ರೇಟರ್ ರಿಪೋರ್ಟ್ ಬಂದ ಮೇಲೆ ಇದನ್ನು ಇನ್ನೂ ಒಂದುವರ್ಷ ಮುಂದುವರಿಸಬೇಕು ಎಂದು ನಿರ್ಣಯ ತೆಗೆದುಕೊಳ್ಳಲಾಗಿದೆ. ಏಕೆಂದರೆ ಈಗ ಈ ಬ್ಯಾಂಕ್ ಇಂಪ್ರೂವ್‌ಮೆಂಟ್ ಆಗುತ್ತಿದೆ ಮೊದಲಿನಿಂದ ನಾವು ಇಲ್ಲಿನ ಹಿಂದಿನವರು ಮಾಡಿದಂತಹ ಕೆಲಸವನ್ನು ಗಮನದಲ್ಲಿಟ್ಟುಕೊಂಡರೆ, ಈಗ ಸಧ್ಯಕ್ಕೆ ಇರತಕ್ಕಂಥ ಅಡ್ಮಿನಿಸ್ಟ್ರೇಟರ್ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ; ಅದಕ್ಕಾಗಿ ಇನ್ನೂ

ಒಂದು ವರ್ಷ ಮುಂದಕ್ಕೆ ಹಾಕಬೇಕೆಂದು ಡೆಪ್ಯುಟಿ ಕಮೀಷನರ್ ರೆಕಮೆಂಡ್ ಮಾಡಿದ್ದಾರೆ. ಅದಕೋಸ್ಕರ ನಾವು ನಿಯಮ 121ರ ಕೆಳಗೆ ಇದನ್ನು ಮುಂದುವರಿಸಬೇಕು ಎನ್ನತಕ್ಕಂಥ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದರೆ ಅವರ ಮೇಲೆ ಚಾರ್ಜಸ್ ಏನು ಇದ್ದವು ಎನ್ನತಕ್ಕಂಥಾದ್ದನ್ನು ಹೇಳುತ್ತಿದ್ದೇನೆ. ಈಗ ಹಿಂದೆ ಇದ್ದಂತಹ ವ್ಯವಸ್ಥಾಪಕ ನಿರ್ದೇಶಕರ ಮಂಡಳಿ ವಿರುದ್ಧ ಆಪಾದನೆಗಳನ್ನು ಮಾಡಲಾಗಿದೆ. ಮೊದಲನೇಯ ಆಪಾದನೆ ನಿಬಂಧಕರ ಆಜ್ಞೆಗೆ ವಿರುದ್ಧವಾಗಿ ದಿನಗೂಲಿ ನೌಕರರ ವೇತನವನ್ನು ಹೆಚ್ಚು ಮಾಡಿರುವುದು. ಬ್ಯಾಂಕ್ ಸಿಬ್ಬಂದಿಗಳಿಗೆ ವಿಧಿಸಿರುವ ಕರಾರುಗಳನ್ನು ಉಲ್ಲಂಘಿಸಿರುವುದು. ಮೂರನೆಯದು, ಸಾಲವಸೂಲಾತಿಯನ್ನು ಕೇವಲ ಶೇಕಡ 0.6 ಮಾಡಿರುವುದು; ನಾಲ್ಕನೆಯದು ಕೇವಲ 76 ಸಾವಿರ ಮಾತ್ರ ಸಾಲ ವಿತರಣೆ ಮಾಡಿರುವುದು; 5ನೆಯದು ಸರ್ಕಾರದ ಅನುಮತಿ ಇಲ್ಲದೆ ಆಡಳಿತ ಮಂಡಲಿಯ ನಿರ್ದೇಶಕರನ್ನು ಅಖಿಲ ಕಾಂಗ್ರೇಸ್‌ನ ಸಭೆಯಲ್ಲಿ ಭಾಗವಹಿಸಲು ಕಳುಹಿಸಿರುವುದು; ಆರನೆಯದು ಸರ್ಕಾರದ ಅನುಮತಿ ಇಲ್ಲದೆ ವ್ಯವಸ್ಥಾಪಕ ನಿರ್ದೇಶಕರನ್ನು ಕೆಲಸದಿಂದ ಬಿಡುಗಡೆ ಮಾಡಿರುವುದು; ಏಳನೆಯದು, ತೇವಣಿ ಸಂಗ್ರಹಣೆ ಇಳಿಮುಖವಾಗಿರುವುದು ಇತ್ಯಾದಿ; ಈ 7 ಆರೋಪಗಳ ಪೈಕಿ ಮೂರು ಆರೋಪಗಳಲ್ಲಿ ಭಾಗಶಃ ಸರಿಪಡಿಸಲಾಗಿದ್ದು ಉಳಿದ ಆರೋಪಗಳನ್ನು ಸರಿಪಡಿಸಲಾಗಿಲ್ಲ. ಅದಕ್ಕೆ ಈಗಿನ ಪರಿಸ್ಥಿತಿ ಏನಾಗಿದೆ ಅಂದರೆ ಹಿಂದೆ 0.6 ಪರ್ಸೆಂಟ್ ರಿಕವರಿ ಇತ್ತು; 76 ಸಾವಿರ ರೂಪಾಯಿಗಳು ಮಾತ್ರ ಅವರು ಡಿಸ್‌ಪರ್ಸ್ ಮಾಡಿದ್ದರು; ಇವತ್ತಿನ ಪರಿಸ್ಥಿತಿ ಏನಿದೆ ಅಂದರೆ, ವ್ಯವಸ್ಥಾಪಕ ಮಂಡಳಿಯನ್ನು ರದ್ದುಗೊಳಿಸಿದ ನಂತರ ಸಾಲ ವಸೂಲಾತಿ ಪ್ರಮಾಣ ಶೇಕಡ 44 ಆಗಿದೆ. ತೇವಣಿ ಸಂಗ್ರಹಣೆ 40 ಕೋಟಿಯಿಂದ 69 ಕೋಟಿಗೆ ಹೆಚ್ಚಿಸಿದೆ, ಸಾಲ ವಿತರಣೆ 19 ಕೋಟಿಗೆ ಹೆಚ್ಚಿರುತ್ತದೆ. ಅಂದರೆ 76 ಸಾವಿರದಿಂದ 19 ಕೋಟಿಗೆ ಹೆಚ್ಚಿದೆ. ಅಂದ್ರೆ ಈ ರೀತಿಯಾಗಿ ಸ್ವಲ್ಪ ಇಂಪ್ರೂವ್‌ಮೆಂಟ್ ಆಗುತ್ತಾ ಇದೆ. ಇದು ಆದ ಮೇಲೆ ಬೇಕಾದರೆ ಪುನಃ ಒಂದು ವರ್ಷದ ಮೇಲೆ ಚುನಾವಣೆ ಮಾಡಿ ಆಡಳಿತ ಮಂಡಳಿ ಕೈಯಲ್ಲಿ ಕೊಡೋಣ. ಸಧ್ಯಕ್ಕೆ ಇದೆಲ್ಲಾ ನೋಡಿದಾಗ ಈಗ ಸ್ವಲ್ಪ ಇಂಪ್ರೂವ್‌ಮೆಂಟ್ ಕಾಣುತ್ತಾ ಇದೆ; ಹಿಂದೆ ಚುನಾಯಿತ ಬಾಡಿ, ಅವರು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಈ ತೀರ್ಮಾನ ತೆಗೆದುಕೊಂಡಿದ್ದು ಹೊರತಾಗಿ ಸರ್ಕಾರ ಉದ್ದೇಶಪೂರ್ವಕವಾಗಿ ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರನ್ನು ಹಾಕಲಿಲ್ಲ; ಆದು ಅವರಿಗೂ ಕೂಡ ಗೊತ್ತಿದೆ. ಅದಕ್ಕಾಗಿ ಮುಂದಿನ ಸಲ ಚುನಾವಣೆ ಮಾಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಪಿ.ಸಿ. ಸಿದ್ಧನಗೌಡರ್: ಈಗ ಆಪಾದನೆಗಳು ಅಷ್ಟೊಂದು ಪ್ರಾಮುಖ್ಯವಾದುದು ಅಲ್ಲ. ಇವು ಮಾಮಾಲಿಯಾಗಿ ಸಹಕಾರಸಂಘಗಳಲ್ಲಿ ರಾಜಕೀಯವಾಗಿ ಸೂಪರ್‌ಸೀಡ್ ಮಾಡುತ್ತಾರೆ ಎನ್ನತಕ್ಕಂಥಾದ್ದು ಮಾನ್ಯ ಸಚಿವರು ಹೇಳಿದಂತೆ 3 ವರ್ಷ ಮುಗಿದಿದೆ; ಚುನಾವಣೆ ಏಕೆ ಮಾಡಬಾರದು ಎಂದು ನಾನು ಒತ್ತಾಯ ಮಾಡುತ್ತೇನೆ. ನಾನು ಕಾನೂನು ಪ್ರಕಾರ ಕೇಳುತ್ತಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಸಹಕಾರ ಸಚಿವರು ಚುನಾವಣೆಯಲ್ಲಿ ವಿಶ್ವಾಸ ಇಟ್ಟಿದ್ದಾರೆಂದು ನಾನು ವಿಶ್ವಾಸ ಇಟ್ಟಿದ್ದೇನೆ. ಏಕೆಂದರೆ ನಾನು ಹಲವಾರು ಬಾರಿ ಅವರ ಕಡೆ ಚರ್ಚೆ ಮಾಡಿದ್ದೇನೆ ಚುನಾವಣೆ ಆಗಬೇಕೆನ್ನುವ ಉದ್ದೇಶ ತಮಗೆ ಇದೆ ಎಂಬುದು ನನಗೆ ಗೊತ್ತು. ಇಲ್ಲಿ ಕೆಲವು ಆಪಾದನೆಗಳು ಆಗಿದ್ದಾವೆ ಎಂದು ತಾವು ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಿದ್ದೀರಿ. ಇವತ್ತು ಮೂರು ವರ್ಷ ಆಗಿದೆ. ಮೂರು ವರ್ಷ ಆದ ಮೇಲೆ ತಾವು ಚುನಾವಣೆ ಮಾಡಲಿಕ್ಕೆ ಏನು ಕಷ್ಟ?

ಚುನಾವಣೆಗಳನ್ನು ಮಾಡಿದರೆ ಜನರ ಪ್ರತಿನಿಧಿಗಳು ಬಂದು ಇದಕ್ಕಿಂತ ಹೆಚ್ಚು ಬ್ಯಾಂಕ್ ಸುಧಾರಣೆ ಮಾಡುವುದಕ್ಕೆ ಸಾಧ್ಯ ಇದೆ. ಚುನಾವಣೆ ಏಕೆ ಮಾಡುತ್ತಿಲ್ಲ ಅಂದ್ರೆ ಇನ್ನೂ ಬ್ಯಾಂಕ್ ಸುಧಾರಣೆ ಆಗಬೇಕು ಅಂತ ಈಗ ತಾವು ಹೇಳುತ್ತಿದ್ದೀರಿ ಆದರ ಅರ್ಥ ಎಲೆಕ್ಟೆಡ್ ಜನ ಬಂದರೆ ಬ್ಯಾಂಕ್ ಸುಧಾರಣೆ ಮಾಡಲು ಆಗುವುದಿಲ್ಲ ಅಂದ ಹಾಗಾಯಿತು. ನಿಮ್ಮ ಆಫೀಸರ್ಸ್ ಮೇಲೆ ನಿಮಗೆ ನಂಬಿಕೆ ಇದೆಯೋ ಅಥವಾ ಚುನಾಯಿತ ಪ್ರತಿನಿಧಿಗಳ ಮೇಲೆ ನಿಮಗೆ ನಂಬಿಕೆ ಇದೆಯೋ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಚುನಾಯಿತ ಪ್ರತಿನಿಧಿಗಳ ಮೇಲೆ ನಿಮಗೆ ನಂಬಿಕೆ ಇದ್ದರೆ, ದಯಮಾಡಿ ತಕ್ಷಣ ಚುನಾವಣೆ ಘೋಷಣೆ ಮಾಡಿ ಎಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : – ಚುನಾಯಿತ ಸದಸ್ಯರ ಮೇಲೆ ನಂಬಿಕೆ ಇದೆ ಎಂದು ನನ್ನ ಕಾಲದಲ್ಲಿ ನಾನು ಒಂದು ಸುತ್ತೋಲೆ ಹೊರಡಿಸಿ 31ರ ಮಾರ್ಚ್ ಒಳಗೆ ಎಲ್ಲಾ ಕಡೆ ಚುನಾವಣೆಗಳು ನಡೆಯಬೇಕು ಎಂದು ಹೇಳಿದ್ದೇನೆ. ಅನೇಕ ಬಾರಿ ನಾನು ಹೇಳಬೇಕಾಗುತ್ತದೆ. ಏಕೆಂದರೆ ಅನೇಕರು ತಮ್ಮ ಶಾಸಕ ಮಿತ್ರರು ಅಲ್ಲಿನ ಮುಖಂಡರು ಇವರೆಲ್ಲಾ ಬಂದು ಕೇಳಿಕೊಂಡು ಹೋದ ಮೇಲೆ ನಾವು ಒತ್ತಾಯಪೂರ್ವಕ ನನ್ನ ಮನಸ್ಸಿನ ಇಚ್ಛೆ ವಿರುದ್ಧ ನಾವು ಎಕ್ಸ್‌ಟೆನ್‌ಷನ್ ಕೊಟ್ಟಿದ್ದೇವೆ. ಆದರೆ ಈ ಕೇಸ್‌ನಲ್ಲಿ ಏನಾಗಿದೆ ಅಂದರೆ, ಆಡಳಿತ ಮಂಡಲಿ ಏನು ಇತ್ತು, ಅವರ ಕಾಲದಲ್ಲಿ 0.6 ಪರ್ಸೆಂಟ್ ರಿಕವರಿ ಇತ್ತು. 76 ಸಾವಿರ ರೂಪಾಯಿ ಮಾತ್ರ ಅವರು ಡಿಸ್‌ಪರ್ಸ್ ಮಾಡಿದ್ದರು. ಇವತ್ತು ನಾನು ಡೆಪ್ಯುಟಿ ಕಮೀಷನರ್ ಕೈಯಲ್ಲಿ ಕೊಟ್ಟ ಮೇಲೆ ಇವತ್ತು 19 ಕೋಟಿ ರೂಪಾಯಿಗಳ ಲೋನ್ ಡಿಸ್‌ಪರ್ಸ್ ಮಾಡಿದ್ದಾರೆ. ಸುಮಾರು 69 ಕೋಟಿ ರೂಪಾಯಿ ಡಿಪಾಜಿಟ್ ಮಾಡಿದ್ದಾರೆ. ಇದು ಒಳ್ಳೆಯದು. ಆದರೆ ಒಳ್ಳೆಯದು ಎಂದು ಹೇಳಿ ಇದನ್ನು ಮುಂದುವರಿಸಬೇಕು ಅಂತ ನನ್ನ ಉದ್ದೇಶ ಇಲ್ಲ. ಇನ್ನೊಂದು ತೊಡಕು ಏನಾಗಿದೆ ಅಂದರೆ, 1976ರಲ್ಲಿ ಏನು ಸೊಸೈಟಿಗಳನ್ನು ಅಮಾಲ್‌ಗಮೇಷನ್ ಮಾಡಬೇಕು ಎಂಬ ಕಾನೂನು ಇತ್ತು, ಆಗ ಧಾರವಾಡ ಡಿಸ್ಟ್ರಿಕ್ಟ್‌ಗೆ ಮಾತ್ರ ಮಾಡಲಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ ಮಾಡಿದರು. ಆಮೇಲೆ ಸುಮಾರು 736 ಸೊಸೈಟಿಗಳನ್ನು ಅಮಾಲ್‌ಗಮೇಟ್ ಮಾಡಿ ಅದನ್ನು ಸುಮಾರು 293 ಸೊಸೈಟಿಗಳನ್ನಾಗಿ ಮಾಡಿದರು. ಆದರೆ ಇದರಲ್ಲಿ 197 ಜನ ಇವತ್ತು ಹೈಕೋರ್ಟಿಗೆ ಹೋಗಿದ್ದಾರೆ. ಏನೆಂದರೆ ಈ ಅಮಾಲ್‌ಗಮೇಟ್ ಮಾಡಿದ್ದು ಸರಿಯಲ್ಲ ; ಒಂದುಗೂಡಿಸಿದ್ದು ಸರಿಯಲ್ಲ ನಮಗೆ ಸಪರೇಟ್ ಆಗಿ ಇರಬೇಕು ಎನ್ನತಕ್ಕಂಥ ವಾದವನ್ನು ಹೂಡಿ ಕೋರ್ಟಿಗೆ ಹೋಗಿದ್ದಾರೆ. ಈಗ ಚುನಾವಣೆ ಮಾಡಬೇಕಾದರೂ ಕೂಡ ಆ ಸೊಸೈಟಿಗಳ ಮೆಂಬರ್‌ಶಿಪ್ ಮೇಲೆ ಮಾಡಬೇಕಾಗುತ್ತದೆ. ಈಗೇನಿದ್ದರೂ ಹೈಕೋರ್ಟಿನಿಂದ ಸ್ಟೇ ವೆಕೇಟ್ ಮಾಡಿಸಿ ತಕ್ಷಣ ಚುನಾವಣೆ ಮಾಡಬೇಕು. ನಾವು ಸ್ವಲ್ಪ ಕಾಲಾವಕಾಶವನ್ನು ತೆಗೆದುಕೊಂಡು ಈ ಕಡೆ ಅಡ್ವೋಕೇಟ್ ಜನರಲ್‌ರವರನ್ನು ಕರೆಸಿ ನಮ್ಮ ಡೆಪ್ಯುಟಿಕಮೀಷನರ್‌ರವರನ್ನು ಕರೆಸಿ ಯಾವ ರೀತಿ ಚುನಾವಣೆಯನ್ನು ಬೇಗನೆ ಮಾಡುವುದಕ್ಕೆ ಸಾಧ್ಯತೆ ಇದೆ ಎಂಬುದನ್ನು ನೋಡಿ ಮಾಡಿಸುತ್ತೇನೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ಇದನ್ನು ಕೂಡ ತಾವು ಗಮನದಲ್ಲಿಇಟ್ಟುಕೊಳ್ಳಬೇಕು. ಇದು ರಾಜಕೀಯ ಉದ್ದೇಶದಿಂದ ಆಗಲಿ ಬೇರೆ ಯಾವ ಉದ್ದೇಶದಿಂದ ಕೂಡ ಆ ರೀತಿ ಮಾಡಿಲ್ಲ ; ಅವರು ನಮ್ಮ ಕೈಯಲ್ಲಿ ಆಗುವುದಿಲ್ಲ ಅಂದ ಮೇಲೆ ನಾವು ಇದನ್ನು ತೆಗೆದುಕೊಂಡಿದ್ದು.